ಚಿಂತನೆ ಮಾಡುವುದು ಇದೀ ಸಮಾಜಕ್ಕೆ ಸೇರಿದೆ. ಆದ್ದರಿಂದ, ಈ ಆಯವ್ಯಯದಲ್ಲಿ ಈ ಚಿಂತನೆ ಮಾಡಿರುವುದು, ಇದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ರೂಪಿಸಿರುವುದು, ಒಂದು ಹೊಸ ಕಸರತ್ತು, ಒಂದು ಹೊಸ ಮಜಲು. ಈ ದೃಷ್ಟಿಯಿಂದ ಇವತ್ತು, ಇದನ್ನು ಸ್ವಾಗತ ಮಾಡತಕ್ಕ ಕೆಲಸ.....

ಉಪಾಪಧ್ಯಕ್ಷರು : ತಾವಿನ್ನೂ ಎಷ್ಟು ವೇಳೆ ತೆಗೆದುಕೊಳ್ಳುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ : ತಾವು ಎಷ್ಟು ಸಮಯ ಹೇಳಿದರೆ, ಅಷ್ಟು ಅಥವಾ ಇನ್ನು ಅರ್ಧ ಗಂಟೆ ಮಾತನಾಡುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : 6 ಗಂಟೆಗೆ ಕಾಮನ್ವೆಲ್ತ್ ಪಾರ್ಲಿಮೆಂಟರಿ ಸಭೆ ಇದೆ. ಈಗ ಎರಡು ಬಿಲ್ಲುಗಳನ್ನು ತೆಗೆದುಕೊಳ್ಳಬಹುದು. ಅವರು ನಾಳೆ ಚರ್ಚೆಯನ್ನು ಮುಂದುವರಿಸಬಹುದು.

ಉಪಾಧ್ಯಕ್ಷರು : ಈಗ ಬಿಲ್ಲುಗಳನ್ನು ತೆಗೆದುಕೊಳ್ಳೋಣ. ತಾವು ನಾಳೆ ಮುಂದುವರಿಸಿ.

ಶ್ರೀ ಕಾಗೋಡು ತಿಮ್ಮಪ್ಪ : ಆಗಬಹುದು.

ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ 1994 ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1994 ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈ ವಿಧೇಯಕದ ಕಾಪಿಯನ್ನು ಸಹ ನಮಗೆ ಕೊಟ್ಟಿಲ್ಲ. ಇದು ಪ್ರಮುಖವಾದ ಬಿಲ್ ಇದೆ. ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಇದನ್ನು ಪಾಸ್ ಮಾಡಿಕೊಳ್ಳುವುದಕ್ಕೆ ನಮ್ಮದೇನೂ ಆಭ್ಯಂತರ ಇಲ್ಲ. ಜೊತೆಗೆ ತಮಗೆ ಬಹುಮತ ಇದೆ. ದಯಮಾಡಿ ಇದನ್ನು ನಾಳೆ ತೆಗೆದುಕೊಳ್ಳಬಹುದು.

ಉಪಾಧ್ಯಕ್ಷರು : ಆಯಿತು. ನಾಳೆ ತೆಗೆದುಕೊಳ್ಳೋಣ. ಈಗ ಒಂದು ಸಂದೇಶವಿದೆ. ಅದು ಕಾಮನ್ವೆಲ್ತ್ ದಿನಾಚರಣೆಯ ಸಂದೇಶ.

ಸಂದೇಶ

'ಕಾಮನ್ ವೆಲ್ತ್ ದಿನಾಚರಣೆ ಸಂದೇಶ 1994"

ಕಾಮನ್ವೆಲ್ತ್ ಮುಖ್ಯಸ್ಥೆಯಾದ ಘನತೆವೆತ್ತ ಮಹಾರಾಣಿಯವರಿಂದ ಕಾಮನ್ವೆಲ್ತ್ ದಿನಾಚರಣೆಯ ಸಂಬಂಧದಲ್ಲಿ ನನಗೆ ಬಂದಿರುವ 14ನೇ ಮಾರ್ಚ್ 1994ರ ದಿನಾಂಕದ ಸಂದೇಶವು ಈ ಕೆಳಗಿನಂತಿದೆ.

ಈ ವರ್ಷದ ಅತಿ ಜನಪ್ರಿಯವಾದ ಕಾಮನ್ವೆಲ್ತ್ ಕಾರ್ಯಕ್ರಮವೆಂದರೆ ಕೆನಡಾದ ವಿಕ್ಟೋರಿಯಾದಲ್ಲಿ ನಡೆಯುವ ಕಾಮನವೆಲ್ತ್ ಕ್ರೀಡೆಗಳು ಹಾಗೂ ತತ್ಸಬಂಧಿ ಉತ್ಸವ, ಅಭಿವೃದ್ಧಿಯ ನಾನಾ ಪಂತಗಳಲ್ಲಿರುವ ಚಿಕ್ಕ ಹಾಗೂ ಬೃಹತ್ ರಾಷ್ಟ್ರಗಳ ಪ್ರತಿನಿಧಿಗಳ ಮೂಲಕವಾಗಿ ವಿಶ್ವದಾದ್ಯಂತವೂ ಲಕ್ಷೋಪಲಕ್ಷ ಮಂದಿ ಸಂಪತ್ಸಾಧನೆಯ ಈ ಮಹೋತ್ಸವದ ಈ ಆಚರಣೆಯನ್ನು ವೀಕ್ಷಿಸುತ್ತಾರೆ. ಅಬಾಲವೃದ್ಧರಾಗಿ ಬಹುತೇಕ ನಾವೆಲ್ಲರೂ ಪ್ರೇಕ್ಷಕರಾಗಿಯೋ, ಪಾತ್ರಧಾರಿಗಳಾಗಿಯೋ ಕ್ರೀಡೆಯಲ್ಲಿ ಆಸಕ್ತರಾಗಿದ್ದೇವೆ. ಅಥವಾ ಪಾಲ್ಗೊಂಡಿದ್ದೇವೆ. ಇದರಿಂದಾಗಿ ಕ್ರೀಡೆಯನ್ನು ಈ ಸಾಲಿನ ಕಾಮನ್ವೆಲ್ತ್ ದಿನಾಚರಣೆಯ ವಸ್ತು ವಿಷಯವಾಗಿ ಆಯ್ಕುಕೊಂಡಿರುವುದು ಉಚಿತವಾಗಿದೆ.